ನಿರ್ದೇಶಕರಿಗೆ ಎಷ್ಟೇ ಅನುಭವವಿದ್ದರೂ, ಸ್ಟಾರ್ ನಟರ ಬಳಿ ಇನ್ನೊಂದು ಶಾಟ್ ಕೇಳುವಾಗ ಮುಜುಗರವಾಗುತ್ತದೆ. ಇನ್ನೊಮ್ಮೆ ನಟಿಸಲು ಹೇಳಬಹುದಾ ಎಂಬ ಪ್ರಶ್ನೆ ಬರುತ್ತದೆ. ಆದರೆ ಫಹಾದ್ ಅವರ ಬಳಿ ನನಗೆ ಹಾಗೆ ಅನ್ನಿಸಲಿಲ್ಲ. ನನ್ನ ಆರಂಭಿಕ ಸಿನಿಮಾಗಳಲ್ಲಿ ಹೊಸಬರ ಜೊತೆ ಹೇಗೆ ಕೆಲಸ ಮಾಡುತ್ತಿದ್ದೆನೋ ಹಾಗೇ ಅನಿಸುತ್ತಿತ್ತು. ಯಾವುದೇ ಮುಜುಗರ ಇಲ್ಲದೆ ಈ ದೃಶ್ಯ ಚೆನ್ನಾಗಿ ಬಂದಿಲ್ಲ ಎಂದು ಹೇಳಬಹುದಿತ್ತು. ಹಾಗೆ ಅವರಿರುತ್ತಿದ್ದರು.

ಫಹಾದ್ ಅವರು ಕ್ಯಾರವಾನ್‌ನಲ್ಲಿ ಕೂರುತ್ತಿರಲಿಲ್ಲ. ಎಷ್ಟು ಹೊತ್ತಾದರೂ ಸರಿ, ಸೆಟ್‌ನಲ್ಲೇ ಕಾಯುತ್ತಾ ಕೂತಿರುತ್ತಿದ್ದರು. ಇಷ್ಟು ಸಿನಿಮಾಗಳನ್ನು ಮಾಡಿದ್ದರೂ, ನಾನಿನ್ನೂ ಮೊದಲ ಸಿನಿಮಾ ಮಾಡುತ್ತಿದ್ದೇನೆ ಎನ್ನುವಂತೆ ಅವರಿರುತ್ತಿದ್ದರು. ಫಹಾದ್ ಒಬ್ಬರೇ ಅಲ್ಲ, ಅಪರ್ಣಾ ಬಾಲಮುರಳಿ, ಜಾಯ್ ಮ್ಯಾಥ್ಯೂ, ರೋಷನ್ ಮ್ಯಾಥ್ಯೂ ಇವರೆಲ್ಲರ ಕೆಲಸ ವೈಖರಿ, ಸಿನಿಮಾ ತುಂಬಾ ಚೆನ್ನಾಗಿ ಬರಬೇಕೆನ್ನುವ ಅವರ ಉತ್ಸಾಹ ಆಸಕ್ತಿದಾಯಕ ಎನಿಸುತ್ತಿದೆ.

◆ **ಧೂಮಂ ಸಿನಿಮಾದಿಂದ ಜನರು ಏನನ್ನು ನಿರೀಕ್ಷಿಸಬಹುದು? ಸಿನಿಮಾವನ್ನು ವಿಶಿಷ್ಟಗೊಳಿಸುವ ಅಂಶ ಯಾವುದು?**

ಇದು ನನ್ನ ಶೈಲಿಯ ಮತ್ತೊಂದು ಸಿನಿಮಾ. ಯಾರು ಈ ಶೈಲಿ ಇಷ್ಟಪಡುತ್ತಾರೋ ಅವರಿಗೆ ಈ ಸಿನಿಮಾದಿಂದ ಇನ್ನೂ ಖುಷಿಯಾಗುತ್ತದೆ. ಸಿನಿಮಾದಲ್ಲಿ ಆಳ ವಿಷಯ ಹಾಗೂ ಪ್ರಭಾವಶಾಲಿ ನಟನೆಯಿದೆ. ಮೇಕಿಂಗ್ ಕೂಡ ಕುತೂಹಲ ಕೆರಳಿಸುತ್ತದೆ. ಎಷ್ಟೇ ಕ್ಲಿಷ್ಟ ಸ್ಕ್ರೀನ್ ಪ್ಲೇ ಇದ್ದರೂ ಜನರಿಗೆ ಸ್ಪಷ್ಟವಾಗುವಂತೆ, ಒಂದೆರಡು ಗಂಟೆ ಅವರನ್ನು ಸಂಪೂರ್ಣ ಹಿಡಿದಿಟ್ಟುಕೊಳ್ಳುವಂತೆ ಸಿನಿಮಾ ರೂಪಿಸಲಾಗಿದೆ. ಅರೆಕ್ಷಣ ಬೇರೆಡೆ ನೋಡಿದರೂ ಏನೋ ಮಿಸ್ ಆಗಿಬಿಡುತ್ತೆ ಎಂದು ಕಣ್ಣು ಕದಲಿಸದಂತೆ ನೋಡಿಸಿಕೊಳ್ಳುವ ಸಿನಿಮಾ ಎನ್ನಬಹುದು. ಆ ರೀತಿಯ ಸ್ಕ್ರೀನ್ ಪ್ಲೇ ಇದೆ. ಜನರಿಗೆ ಸಿನಿಮಾ ಇಷ್ಟವಾಗುತ್ತದೆಂಬ ಭರವಸೆಯಿದೆ.

ಪ್ರತಿ ನಿರ್ದೇಶಕನಿಗೂ ಆತನ ಸಿನಿಮಾ ವಿಶೇಷವೇ ಎನಿಸುತ್ತದೆ. ಎಲ್ಲರೂ ಹಾಗೇ ಅಂದುಕೊಳ್ಳುತ್ತೇವೆ, ನಮ್ಮ ಸಿನಿಮಾ ಯೂನಿಕ್ ಆಗಿದೆ ಎಂದು. ಆದರೆ ಸಿನಿಮಾ ನೋಡಿದಾಗ ಜನರಿಗೆ ಏನನ್ನಿಸುತ್ತೆ ಎನ್ನುವುದೇ ಮುಖ್ಯ. ಸಿನಿಮಾ ನೋಡಿದ ಜನರಿಗೆ ಅದು ಹೊಸತೆನಿಸುತ್ತೋ, ಪೂರ್ತಿ ಭಿನ್ನ ಎನಿಸುತ್ತೋ ಅಥವಾ ಇನ್ನೇನೆನಿಸುತ್ತದೋ ಎಂಬುದು ಮುಖ್ಯ. ಜೊತೆಗೆ, ನಿರ್ದೇಶಕನಾದವನಿಗೆ, ಸಿನಿಮಾ ಮಾಡುವ ಪ್ರಕ್ರಿಯೆ ಎಷ್ಟು ಖುಷಿಯಾಗಿತ್ತು, ಎಷ್ಟು ಹೊಸತು ಕಲಿಯಲು ಸಿಕ್ಕಿತು ಎಂಬುದು ವಿಷಯವಾಗುತ್ತದೆ. ಧೂಮಂ ಈ ಹೊಸತನಗಳನ್ನು ಹೆಚ್ಚಾಗಿ ನೀಡಿತು.

◆ **ಸಿನಿಮಾ ಫಸ್ಟ್ ಲುಕ್ ಕುತೂಹಲ ಕೆರಳಿಸುವಂತಿದೆಯಲ್ಲಾ...**

ಸಿನಿಮಾ ಫೀಲ್ ಪೋಸ್ಟರ್‌ನಲ್ಲೇ ಇದೆ. ಈ ಪೋಸ್ಟರ್ ವಿನ್ಯಾಸ ಮಾಡಿದ ಆದರ್ಶ್, 'ಲೂಸಿಯಾ' ಸಿನಿಮಾದಿಂದಲೂ ನನ್ನ ಜೊತೆ ಕೆಲಸ ಮಾಡುತ್ತಿದ್ದಾರೆ. ಅವರಿಗೆ ನಾನು ಮಾಡುವ ಸಿನಿಮಾಗಳ ಪರಿಕಲ್ಪನೆ, ಆಲೋಚನೆಗಳು ಸ್ಪಷ್ಟವಾಗಿ ಅರ್ಥವಾಗುತ್ತವೆ. ನಾವು ಕೊಡುವ ಥೀಮ್ ಅನ್ನು ಆಸಕ್ತಿದಾಯಕವಾಗಿ ಕಟ್ಟಿಕೊಡುತ್ತಾರೆ. 'ಲೂಸಿಯಾ', 'ಯು ಟರ್ನ್', 'ದ್ವಿತ್ವ' ಪೋಸ್ಟರ್ ವಿನ್ಯಾಸ ಮಾಡಿದ್ದು ಅವರೇ. 'ಧೂಮಂ' ಪೋಸ್ಟರ್ ನೋಡಿದಾಗ ಒಂದಿಷ್ಟು ಪ್ರಶ್ನೆಗಳು ಹುಟ್ಟುತ್ತವೆ. ಆ ಪ್ರಶ್ನೆಗಳು, ಕುತೂಹಲಕ್ಕೆ ಸಿನಿಮಾದಲ್ಲಿ ಉತ್ತರವಿದೆ.

◆ **ಶರವೇಗದಲ್ಲಿ ಸಿನಿಮಾ ಮಾಡಿ ಮುಗಿಸಿದಿರಿ. ಇದು ಸಾಧ್ಯವಾದದ್ದು ಹೇಗೆ?**

ಸಿನಿಮಾ ಚಿತ್ರೀಕರಣ ಆರಂಭವಾಗಿದ್ದು ಕಳೆದ ನವೆಂಬರ್ ತಿಂಗಳಿನಲ್ಲಿ. ಕೆಲವೇ ತಿಂಗಳುಗಳಲ್ಲಿ ಸಿನಿಮಾ ಚಿತ್ರೀಕರಣ ಮುಗಿಯಿತು. ಇದಕ್ಕೆ ಹಲವರು ಅಚ್ಚುಕಟ್ಟಾಗಿ ಕೆಲಸ ಮಾಡಿದ್ದು ಕಾರಣ. ಪ್ರೊಡಕ್ಷನ್ ತಂಡದಲ್ಲಿ ನನ್ನೊಂದಿಗೆ ಮುಂಚೆಯಿಂದಲೂ ಕೆಲಸ ಮಾಡಿದವರೇ ಇದ್ದರು. ಎಲ್ಲರ ಹತ್ತಿರ ಸ್ಕ್ರಿಪ್ಟ್ ಇತ್ತು. ಏನು ಶೂಟ್ ಮಾಡುತ್ತಿದ್ದೇವೆ, ಯಾಕೆ ಮಾಡುತ್ತಿದ್ದೇವೆ ಎನ್ನುವುದು ಎಲ್ಲರಿಗೂ ಗೊತ್ತಿತ್ತು. ಫಿಲ್ಮ್ ಮೇಕಿಂಗ್ ಪ್ರಕ್ರಿಯೆಯನ್ನು ಚೆನ್ನಾಗಿ ರೂಪಿಸಿಕೊಂಡಿದ್ದೆವು. ಕಥೆಯ ಬಗ್ಗೆ ಎಲ್ಲರಲ್ಲೂ ಸ್ಪಷ್ಟತೆ ಇದ್ದರೆ, ಸಂವಹನ ಸರಿಯಾಗಿದ್ದರೆ ಕೆಲಸ ಸಲೀಸಾಗುತ್ತದೆ.

ಸಿನಿಮಾಟೊಗ್ರಫರ್ ಪ್ರೀತಾ ಜಯರಾಮನ್, ಹೊಂಬಾಳೆ ಪ್ರೊಡಕ್ಷನ್, ಸಿನಿಮಾ ನಿರ್ದೇಶನವನ್ನು ಸರಾಗ ಮಾಡಿಸಿದ್ದು. ಸ್ಕ್ರಿಪ್ಟ್‌ನಲ್ಲಿ ಯಾವುದೇ ಕಟ್ಟುಪಾಡುಗಳನ್ನು ಹೇರದೇ ಸ್ವತಂತ್ರವಾಗಿ ಕೆಲಸ ಮಾಡಲು ಹೊಂಬಾಳೆ ನಿರ್ಮಾಣ ಸಂಸ್ಥೆ ಅನುವು ಮಾಡಿಕೊಟ್ಟಿತು.

◆ **ನಿಮ್ಮ ಮುಂದಿನ ಸಿನಿಮಾ?**

ಒಂದು ಸಿನಿಮಾ ಮಾಡಿ ಮುಗಿಸುವವರೆಗೂ ನಾನು ಬೇರೇನನ್ನೂ ಪ್ಲಾನ್ ಮಾಡಿರುವುದಿಲ್ಲ. ಈ ಸಿನಿಮಾ ಮುಗಿದು ಬಿಡುಗಡೆ ಆಗುವವರೆಗೂ ಮುಂದಿನದ್ದು ಏನು ಅಂತ ನನಗೂ ಗೊತ್ತಿಲ್ಲ. ■



# ಹಾಸ್ಯದ ಬುತ್ತಿಗೆ ಮತ್ತೊಂದು ತುತ್ತು



ಕನ್ನಡದ ಹಾಸ್ಯ ಸಿನಿಮಾಗಳ ಸಾಲಿಗೆ ಇನ್ನು ಕೆಲವೇ ದಿನಗಳಲ್ಲಿ ಮತ್ತೊಂದು ಚಿತ್ರ ಸೇರ್ಪಡೆಯಾಗಲು ಸಜ್ಜಾಗುತ್ತಿದೆ. 'ಬರ್ಗೆಟ್ ಬಸ್ಯಾ' ಸಿನಿಮಾ ಜನರಿಗೆ ಹಾಸ್ಯದೌತಣ ನೀಡುವುದಾಗಿ ಚಿತ್ರತಂಡ ಹೇಳಿಕೊಂಡಿದೆ.

ಪ್ರೀತಿಗಾಗಿ ಹುಡುಗಿಯರ ಹಿಂದೆ ಬೀಳುವ ಹುಡುಗನ ಕಸರತ್ತುಗಳು ಈ ಸಿನಿಮಾದ ಕಥಾವಸ್ತು. ಈ ಕಸರತ್ತುಗಳನ್ನೇ ಹಾಸ್ಯರೂಪದಲ್ಲಿ ದಾಟಿಸಲಾಗಿದೆ. ಇದು ನೋಡುಗರಲ್ಲಿ ನಗು ಉಕ್ಕಿಸಲಿದೆ ಎಂಬುದು ತಂಡದ ಮಾತು.

ಯರ್ರಂ ರೆಡ್ಡಿ ಪಿಕ್ಚರ್ಸ್ ಸಂಸ್ಥೆ ಅಡಿಯಲ್ಲಿ, ಬಳ್ಳಾರಿಯವರಾದ ವೈ. ನಾಗಾರ್ಜುನ ರೆಡ್ಡಿ ಈ ಚಿತ್ರ ನಿರ್ಮಿಸುತ್ತಿದ್ದಾರೆ. ಚಿತ್ರವನ್ನು ಬೆಂಗಳೂರು, ಸಕಲೇಶಪುರ, ತೀರ್ಥಹಳ್ಳಿ ಮುಂತಾದ ಸ್ಥಳಗಳಲ್ಲಿ ಚಿತ್ರೀಕರಿಸಲಾಗುತ್ತಿದೆ. ಈಗಾಗಲೇ ಬೆಂಗಳೂರಿನ ರಾಜಾಜಿನಗರ, ಮಹಾಲಕ್ಷ್ಮೀ ಬಡಾವಣೆಯಲ್ಲಿ ಚಿತ್ರೀಕರಣ ನಡೆದಿದೆ.

ಈ ಸಿನಿಮಾ ಮೂಲಕ ರಿಶ್ ಹಿರೇಮಠ್ ಮೊದಲ ಬಾರಿಗೆ ನಿರ್ದೇಶನಕ್ಕಿಳಿದಿದ್ದು, ನಾಯಕನಾಗಿಯೂ ಅಭಿನಯಿಸುತ್ತಿದ್ದಾರೆ. ನುರಿತ ನಿರ್ದೇಶಕರ ಬಳಿ ಕೆಲಸ ಕಲಿತು ಕೆಲವು ಕಿರುಚಿತ್ರಗಳನ್ನು ಮಾಡಿರುವ ಅವರು, ಚಂದನವನದಲ್ಲಿ ಪ್ರಯೋಗ ಕೈಗೊಂಡಿದ್ದಾರೆ. ಚಿತ್ರದ ನಾಯಕಿ ಸಂಗೀತ ಎನ್. ಸ್ವಾಮಿ ಸಿನಿಮಾರಂಗಕ್ಕೆ 'ಬರ್ಗೆಟ್ ಬಸ್ಯಾ' ಮೂಲಕ ಪದಾರ್ಪಣೆ ಮಾಡಿದ್ದಾರೆ.

ಸಿನಿಮಾ ಛಾಯಾಗ್ರಹಣ ಶಾಮ್ ಸೆಲ್ವಿನ್, ಸಾಹಿತ್ಯ ಪ್ರಕಾಶ್. ಜಿ., ಸಂಕಲನ ಸಂಜಯ್ ರೆಡ್ಡಿ, ಅನುಜ್ ಎಸ್ ಪರಿವೃದ್ ಅವರ ಸಂಗೀತ ಚಿತ್ರಕ್ಕಿರಲಿದೆ. ■